# ಚಟುವಟಿಕೆ ಹಾಳೆ II: ಅಡಗಿರುವ ಪ್ರಕೃತಿಯನ್ನು ಹುಡುಕಿ

**ಗುರಿ:**

ನೀವು ಈವರೆಗೆ ನೋಡಿರದ ಗಿಡಗಳು ಮತ್ತು ಪ್ರಾಣಿಗಳನ್ನು ಗುರುತಿಸಲು ಪ್ರಯತ್ನಿಸಿ!

**ನಿಮಗೆ ಬೇಕಾಗುವ ಸಾಮಗ್ರಿಗಳು:**



ಕಾಗದ ಮತ್ತು ಪೆನ್ಸಿಲ್

**ಏನು ಮಾಡಬೇಕು:**

ನಿಮ್ಮ ಮನೆಯಿಂದ ಅಥವಾ ಶಾಲೆಯಿಂದ, ಹತ್ತಿರದ ಮಾರುಕಟ್ಟೆ, ಮೈದಾನ, ಉದ್ಯಾನವನ ಅಥವಾ ಮುಖ್ಯ ರಸ್ತೆಯವರೆಗೆ ನಡೆದುಕೊಂಡು ಹೋಗಿ. ಹೋಗುವ ದಾರಿಯಲ್ಲಿ ಗೋಡೆಗಳು, ಪೇವ್‌ಮೆಂಟ್‌ಗಳು, ಬೇಲಿಗಳು ಮತ್ತು ಪಾದಚಾರಿ ಮಾರ್ಗಗಳ ಮೇಲೆ ಅಡಗಿರುವ ಜೀವಿಗಳನ್ನು ಹುಡುಕಿ.

**ಗಮನಿಸಿ:**

ಅಡಗಿರುವ ಕೆಲವು ರೀತಿಯ ಜೀವಿಗಳು ಇಲ್ಲಿವೆ. ನಿಮ್ಮ ನಡಿಗೆಯ ಸಮಯದಲ್ಲಿ ನೀವು ಇವುಗಳಲ್ಲಿ ಯಾವುದನ್ನು ನೋಡಿದ್ದೀರಿ? ಅವುಗಳ ಮುಂದಿರುವ ✔ ಗುರುತು ಹಾಕಿ.

○ **ಕೀಟಗಳ ಗೂಡು:**
ನಿಮಗೆ ಮೊಟ್ಟೆಗಳು ಕಾಣಿಸುತ್ತಿವೆಯೇ?



○ **ಜೇಡ ಮತ್ತು ಬಲೆಗಳು:**
ಆ ಬಲೆಗಳು ಇನ್ನೂ ಬಳಕೆಯಲ್ಲಿವೆಯೇ?



○ **ಪಾಚಿ ಮತ್ತು ಹುಲ್ಲು:**
ಅವು ಒದ್ದೆಯಾಗಿವೆಯೇ ಅಥವಾ ಒಣಗಿವೆಯೇ?





○ **ಇರುವೆಗಳ ಸಾಲು:**
ಅವು ಹೇಗೆ ಚಲಿಸುತ್ತವೆ?



○ **ಬಳ್ಳಿಗಳು:**
ಅವುಗಳಲ್ಲಿ ಹೂವುಗಳು ಬಿಟ್ಟಿವೆಯೇ?

**ಏನು ಮಾಡಬೇಕು:**

ಕೆಳಗೆ ತೋರಿಸಿರುವ ಮಾದರಿಯಂತೆ ನಿಮ್ಮ ನೋಟ್‌ಬುಕ್‌ನಲ್ಲಿ ಚಿತ್ರ ಬಿಡಿಸಿ. ನೀವು ಗಮನಿಸಿದ ವಿಷಯಗಳನ್ನು ಆ ಚೌಕಗಳಲ್ಲಿ ಗೀಚಿ ಹೆಸರನ್ನು ಬರೆಯಿರಿ (ಉದಾಹರಣೆಗೆ: ಗಿಡ, ಜೇಡ, ಕೀಟ ಇತ್ಯಾದಿ). ನೀವು ಪಾದಚಾರಿ ಮಾರ್ಗದ ಮೇಲೆ ಜೇಡವನ್ನು ಕಂಡರೆ, ಆ ಜೇಡ ಮತ್ತು ಅದು ಇದ್ದ ಜಾಗದ ಚಿತ್ರವನ್ನು ಬಿಡಿಸಲು ಪ್ರಯತ್ನಿಸಿ.




**ಕೊಡುಗೆ:**

**ನೇಚರ್ ಕ್ಲಾಸ್‌ರೂಮ್ಸ್** ಸಂಸ್ಥೆಯು ಪೂರ್ವಸಿದ್ಧತಾ ಹಂತದ ಪರಿಸರ ಅಧ್ಯಯನದ ಬೋಧನೆ ಮತ್ತು ಕಲಿಕೆಗೆ ಪೂರಕವಾದ ಪ್ರಕೃತಿ ಶಿಕ್ಷಣದ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುತ್ತದೆ. ಅಲ್ಲದೆ, ಇದು ಶಾಲಾ ಶಿಕ್ಷಕರು ಮತ್ತು ಶಿಕ್ಷಣ ತಜ್ಞರಿಗಾಗಿ ಪ್ರಕೃತಿ ಕಲಿಕೆಯ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರಗಳನ್ನು ನಡೆಸುತ್ತದೆ. ನೇಚರ್ ಕ್ಲಾಸ್‌ರೂಮ್ಸ್ ಈ ಸಂಪನ್ಮೂಲದ ಹಕ್ಕುಗಳನ್ನು ಹೊಂದಿದ್ದು, ಇದನ್ನು CC BY-SA 4.0 ಪರವಾಗಿಯ ಅಡಿಯಲ್ಲಿ ಹಂಚಿಕೊಳ್ಳಲಾಗಿದೆ. ಈ ಆವೃತ್ತಿಯನ್ನು ಐ ವಂಡರ್... ಪತ್ರಿಕೆಯ ಓದುಗರಿಗಾಗಿ ಮಾರ್ಪಡಿಸಲಾಗಿದೆ ಮತ್ತು ಹಕ್ಕುಸ್ವಾಮ್ಯ ಹೊಂದಿರುವವರ ಅನುಮತಿಯೊಂದಿಗೆ ಪ್ರಕಟಿಸಲಾಗಿದೆ. ನೇಚರ್ ಕ್ಲಾಸ್‌ರೂಮ್ಸ್‌ನ ಹೆಚ್ಚಿನ ಕಾರ್ಯಗಳನ್ನು ನೀವು ಅವರ ಜಾಲತಾಣದಲ್ಲಿ ನೋಡಬಹುದು.

ಅನುವಾದ: **ಚಂದ್ರಿಕಾ ವಿಜಯೇಂದ್ರ** | ಪರಿಶೀಲನೆ: **ಪಿ. ಜಿ. ಸ್ಮಿತಾ**